TRANSPORT DEPARTMENT

# ಪ್ರಾದೇಶಿಕ ಸಾರಿಗೆ ಕಛೇರಿ,ಎಲೆಕ್ಟ್ರಾನಿಕ್-ಸಿಟಿ,

# ಬೆಂಗಳೂರು

## *ಮಾಹಿತಿ ಹಕ್ಕು ಅಧಿನಿಯಮ- 2005*

## *4(1)ಬಿ*

## *ದಿನಾಂಕ: 31.12.2020 ರ ಅಂತ್ಯಕ್ಕೆ*

**ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಎಲೆಕ್ಟ್ರಾನಿಕ್-ಸಿಟಿ, ಬೆಂಗಳೂರು ಕಛೇರಿಯ ಅಧಿಕಾರಿಗಳ ಹಾಗೂ ಸಿಬ್ಬಂದಿ ವರ್ಗದ ಹೆಸರು ಮತ್ತು ಪದನಾಮ ಕರ್ತವ್ಯಗಳ ಸಂಕ್ಷಿಪ್ತ ವಿವರಗಳು ಹಾಗೂ ತೀರ್ಮಾನ ಕೈಗೊಳ್ಳುವಲ್ಲಿ ಕಾರ್ಯ ವಿಧಾನ ಪ್ರಕಟಣೆ:4(ಬಿ) ಅದರ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು:**

**ಸಂಘಟನೆ:**

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ ಮತ್ತು ಈ ಕೆಳಕಂಡ ಅಧಿಕಾರಿಗಳು ಇವರ ಅಧೀನದಲ್ಲಿ ಕಾರ್ಯ ನಿರ್ವಹಿಸಿರುತ್ತಿರುತ್ತಾರೆ.

| Sl No | Posts | Sanctioned Strength | Working Strength | Vacant |
|---|---|---|---|---|
| 1 | R T O | 1 | 1 | 0 |
| 2 | Accounts Officer | - | - | - |
| 3 | A R T O | 2 | 2 | 0 |
| 4 | HQA/TTO | - | - | - |
| 5 | Sr I M V | 3 | 1 | 2 |
| 6 | I M V | 2 | 1 | 1 |
| 7 | A S O | - | - | - |
| 8 | Accounts Superintendent | - | - | - |
| 9 | Office Superintendents | 4 | 4 | 0 |
| 10 | Auditor’s | 1 | 1 | 0 |
| 11 | F D A’s | 12 | 6 | 6 |
| 12 | S D A’s | 16 | 6 | 10 |
| 13 | Steno | - | - | - |
| 14 | Typists | 2 | 2 | 0 |
| 15 | Drivers | 2 | 0 | 2 |
| 16 | Group-D | 6 | 2 | 4 |
| 17 | Treasury Guard | 1 | 1 | 0 |
| | **Total** | **52** | **27** | **25** |

**ಈ ಕಛೇರಿಯಲ್ಲಿ ಮುಖ್ಯವಾಗಿ ಸಾರಿಗೆ ಮತ್ತು ಸಾರಿಗೇತರ ವಾಹನಗಳ ನೋಂದಣಿ, ನೋಂದಣಿ ನವೀಕರಣ, ಅರ್ಹತಾ ಪತ್ರ ನೀಡುವಿಕೆ/ನವೀಕರಿಸುವಿಕೆ ತೆರಿಗೆ ವಸೂಲಾತಿ, ಕಲಿಕಾ ಚಾಲನಾ ಅನುಜ್ಞಾಪತ್ರ, ಚಾಲನಾ ಅನುಜ್ಞಾಪತ್ರ, ನಿರ್ವಾಹಕರ ಪತ್ರ ನೀಡುವುದು ಮತ್ತು ವಾಹನಗಳ ಉಪಯೋಗದ ನಿಯಂತ್ರಣದ ಬಗ್ಗೆ ಹಾಗೂ ರಸ್ತೆಯಲ್ಲಿ ಸಂಚರಿಸುವ ವಾಹನಗಳ ತಪಾಸಣಾ ಕಾರ್ಯ ಅನುಪಯುಕ್ತ ವಾಹನಗಳ ಪರಿಶೀಲನೆ, ಅಪಘಾತಕ್ಕೊಳಗಾದ ವಾಹನಗಳ ಪರಿಶೀಲನೆ ಬಗ್ಗೆ ಈ ಕೆಳಕಂಡ ಕಾಯ್ದೆ ನಿಯಮದ ಅಡಿಯಲ್ಲಿ ಕಾರ್ಯ ನಿರ್ವಹಿಸಲಾಗುತ್ತಿದೆ.**

1.ಕೇಂದ್ರ ಮೋಟಾರು ವಾಹನ ಕಾಯ್ದೆ 1988

2.ಕೇಂದ್ರ ಮೋಟಾರು ವಾಹನಗಳ ಕಾಯ್ದೆ ನಿಯಮಗಳು 1989

3.ಕರ್ನಾಟಕ ಮೋಟಾರು ವಾಹನ ನಿಯಮಗಳು 1989

4.ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ ಮತ್ತು ನಿಯಮಗಳು 1957 ಮತ್ತು ಸಂಬಂಧಿಸಿದ ತಿದ್ದುಪಡಿಗಳು.

## ಪ್ರಮುಖ ಕಾರ್ಯಗಳು:

1. ವಾಹನ ನೋಂದಣಿ
2. ಚಾಲನಾ ಹಾಗೂ ನಿರ್ವಾಹಕ ಅನುಜ್ಞಾಪತ್ರಗಳನ್ನು ನೀಡುವಿಕೆ
3. ಸರಕು ಸಾಗಾಣೆ ಮತ್ತು ಪ್ರಯಾಣಿಕ ವಾಹನಗಳಿಗೆ ರಹದಾರಿಗಳನ್ನು ನೀಡುವಿಕೆ.
4. ಮೋಟಾರು ವಾಹನ ತೆರಿಗೆ ಸಂಗ್ರಹಣೆ.
5. ಮೋಟಾರು ವಾಹನಗಳ ನಿಯಮಗಳ ಪ್ರವರ್ತನೆ.
6. ರಸ್ತೆ ಸುರಕ್ಷತಾ ಕ್ರಮಗಳು.
7. ವಾಹನಗಳಿಂದಾಗುವ ವಾಯು ಮಾಲಿನ್ಯ ನಿಯಂತ್ರಣದ ಬಗ್ಗೆ ಪ್ರವರ್ತನೆ.
8. ನಿಗಧಿತ ರಾಜಸ್ವವನ್ನು ಸಂಗ್ರಹಿಸುವುದು.
9. ಅಪಘಾತಕ್ಕೊಳಗಾದ ವಾಹನಗಳ ತಪಾಸಣೆ
10. ಅನುಪಯುಕ್ತ ವಾಹನಗಳ ಪರಿಶೀಲನೆ.
11. ಚಾಲನಾ ತರಬೇತಿ ಶಾಲೆಗಳಿಗೆ ಅನುಜ್ಞಾಪತ್ರವನ್ನು ನೀಡುವುದು.
12. ವಾಯು ಮಾಲಿನ್ಯ ತಪಾಸಣಾ ಕೇಂದ್ರಗಳನ್ನು ಪರಿಶೀಲನೆ ಮಾಡುವುದು.